# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 10 |
| ಸದಸ್ಯರ ಹೆಸರು | : | ಶ್ರೀ ಎಸ್. ರುದ್ರೇಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸೌರ ವಿದ್ಯುತ್ ಉಪಯೋಗಕ್ಕೆ ಸರ್ಕಾರ ಅವಕಾಶ ನೀಡಿರುವುದು ನಿಜವೇ; | ಸರ್ಕಾರದ ಸೌರ ನೀತಿ 2014-21 ಮತ್ತು ಅದರ ತಿದ್ದುಪಡಿಗಳು, Karnataka Renewable Energy Policy 2022-27 ಹಾಗೂ KERC (Implementation of Solar Rooftop Photovoltaic Power Plants) ವಿನಿಮಯಗಳು 2016 ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಕಾಲಕಾಲಕ್ಕೆ ಹೊರಡಿಸುವ ಸೋಲಾರ್ ದರ ಆದೇಶಗಳಲ್ಲಿನ (Tariff Order) ನಿಯಮಾವಳಿಗಳು ಹಾಗೂ ಆದೇಶಗಳನ್ವಯ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಿ ಸೌರ ವಿದ್ಯುತ್‌ನ್ನು ಉತ್ಪಾದಿಸಲು ಹಾಗೂ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ) | ಕೈಗಾರಿಕೆಗಳಲ್ಲಿ ಮೇಲ್ಛಾವಣಿಯ ಮೇಲೆ ಸ್ಥಾಪಿಸುವ ಸೌರ ವಿದ್ಯುತ್ (Roof Top Solar System) ಉಪಯೋಗಕ್ಕೆ ಸರಿಯಾದ ಮಾರ್ಗದರ್ಶನಗಳಿಲ್ಲದೆ ಗ್ರಾಹಕರ ಮತ್ತು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ನಿರಂತರ ಚರ್ಚೆಗಳು ನಡೆಯುತ್ತಿದ್ದು, ವಿಶೇಷವಾಗಿ 501 KUA ಮೇಲ್ಪಟ್ಟ ಮೇಲ್ಛಾವಣಿ (Roof Top) ಸೌರ ವಿದ್ಯುತ್ ಸ್ಥಾಪನೆಗೆ ಸಾಕಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೇಲ್ಛಾವಣಿ ಸೌರಶಕ್ತಿ ಯೋಜನೆಯಡಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಗೃಹಬಳಕೆ, ಕೈಗಾರಿಕಾ, ವಾಣಿಜ್ಯ ಗ್ರಾಹಕರು ಅರ್ಹರಾಗಿದ್ದು, online ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.<br>ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು KERC (Implementation of Solar Rooftop Photovoltaic Power Plants) ವಿನಿಮಯಗಳು 2016 ಹಾಗೂ ಕಾಲಕಾಲಕ್ಕೆ ಹೊರಡಿಸುವ ಸೋಲಾರ್ ದರ ಆದೇಶಗಳಲ್ಲಿ (Tariff Order) ಕೈಗಾರಿಕೆಗಳ ಮೇಲ್ಛಾವಣಿಯ ಮೇಲೆ ನೆಟ್ ಮೀಟರಿಂಗ್‌ನಡಿ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಿ ಸೌರ ವಿದ್ಯುತ್‌ನ್ನು ಉತ್ಪಾದಿಸಲು ಹಾಗೂ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>KERC (Implementation of Solar Rooftop Photovoltaic Power Plants) ವಿನಿಮಯಗಳು 2016 ರನ್ವಯ 501 KVA ಹಾಗೂ ಮೇಲ್ಪಟ್ಟ ಸಾಮರ್ಥ್ಯದ ಸೌರ ಮೇಲ್ಛಾವಣಿ ಘಟಕಗಳನ್ನು ಸ್ಥಾಪಿಸಲು ಕರಡು ವಿದ್ಯುತ್ ಖರೀದಿ ಒಪ್ಪಂದಕ್ಕೆ ಕೆ.ಇ.ಆರ್.ಸಿ. ಆಯೋಗದ ಅನುಮೋದನೆ ಪಡೆದುಕೊಳ್ಳಬೇಕಾಗಿರುತ್ತದೆ.<br>ದಿನಾಂಕ: 18.07.2022 ರಲ್ಲಿ ಕೆ.ಇ.ಆರ್.ಸಿ. ಆದೇಶದಲ್ಲಿ ನೆಟ್ ಮೀಟರಿಂಗ್ ಸೌಲಭ್ಯ ಇಚ್ಛಿಸುವ ಗ್ರಾಹಕರು, ವಿದ್ಯುತ್‌ನ್ನು ಓಪೆನ್ ಆಕ್ಸೆಸ್ ಕಾರ್ಯವಿಧಾನದಲ್ಲಿ (Open Access Mechanism) ಸ್ವಂತ ಬಳಕೆ / ಇತರ ಉತ್ಪಾದನಾ (Captive / other sources) ಮೂಲಕ ಪಡೆದುಕೊಳ್ಳುವಂತಿಲ್ಲ ಹಾಗೂ ಅಂತಹ ಗ್ರಾಹಕರು ಒಟ್ಟು ಮೀಟರಿಂಗ್ (Gross metering) ಅಥವಾ ಸ್ವಂತ ಬಳಕೆಗಾಗಿ (captive) ಉತ್ಪಾದನಾ ಆಯ್ಕೆ ಮಾಡಬಹುದು ಎಂದು ತಿಳಿಸಲಾಗಿದೆ.<br>ಕೈಗಾರಿಕೆಗಳಲ್ಲಿ ಸೌರ ವಿದ್ಯುತ್ ಮೇಲ್ಛಾವಣಿ ಸ್ಥಾಪನೆಗೆ ವಿಭಿನ್ನ ನಿಲುವು ಯಾವುದೂ ಇರುವುದಿಲ್ಲ. |
| ಇ) | ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು) | |
| ಈ) | ರಾಜ್ಯದ ನಾಲ್ಕು ಸರಬರಾಜು ಕಂಪನಿಗಳಲ್ಲಿ ವಿಭಿನ್ನ ನಿಲುವು ಇರುವುದಾಗಿ ತಿಳಿದು ಬಂದಿದ್ದು (KERC) ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು? | |

ಸಂಖ್ಯೆ: ಎನರ್ಜಿ 31 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು